**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ**
**ಸಿಸಿ ನಂಬರಃ 1858/2011**

*ನಾನು ಶ್ರೀ ವೀರೇಶ ಕುಮಾರ ಸಿ. ಕೆ.*
*ಬಿ.ಎ.ಎಲ್. ಎಲ್.ಎಲ್.ಎಮ್. ಸಿಸಿ ಇನ್ ಸೈಬರ ಲಾ*
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ
**ದೋಷಾರೋಪಣೆ**

ಆರೋಪಿತರುಃ
1) ಮಲ್ಲಪ್ಪಾ ಭೀಮಪ್ಪಾ ಮಾದರ ಸಾಃ ಶಿಂದಿಕುರಬೇಟ
2) ಹಾಲಪ್ಪಾ ಕಲ್ಲಪ್ಪಾ ಹೊನ್ನಾಗೋಳ ಸಾಃ ಶಿಂದಿಕುರಬೇಟ
4) ಮಹಾದೇವ ಶ್ರೀಮಂತ ನಂದಗಾಂವಿ ಸಾಃ ಮಲ್ಲಾಪೂರ ಪಿ.ಜಿ

ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ಮೊದಲನೆಯದಾಗಿ, ದಿಃ **08-06-2011** ರಂದು ರಾತ್ರಿ **01-00** ಸುಮಾರಿಗೆ ಗೋಕಾಕ ಪೋಲಿಸ ಠಾಣಾ ಪೈಕಿ ಗೋಕಾಕ ಶಹರದ ಅಪ್ಸರಾ ಕೂಟದ ಹತ್ತಿರ ಶ್ರೀ ಗ್ರಾಮದೇವತೆಯ ಗುಡಿಯ ಬಾಗಿಲಕ್ಕೆ ಹಾಕಿದ ಕೀಲಿಗಳನ್ನು ಆರೋಪಿತರಾದ ನೀವು ಕಬ್ಬಿಣದ ರಾಡದಿಂದ ಕೊಂಡಿಯನ್ನು ಮುರಿದು ಒಳಹೊಕ್ಕು ಕಳುವು ಮಾಡುವ ಇರಾದೆಯಿಂದ ಅಪ್ರಾಮಾಣಿಕತೆಯಿಂದ ಬಾಗಿಲ ಮುರಿದು ತೆಗೆದು ಅತೀಕ್ರಮ ಪ್ರವೇಶ ಮಾಡಿ ಐಪಿಸಿ ಕಲಂ **457** ರಡಿ ಶಿಕ್ಷಸಲ್ಪಡುವ ಅಪರಾಧವನ್ನು ಮಾಡಿರುವಿರಿ**.**

ಎರಡನೇಯದಾಗಿ **,**ಅದೇ ದಿನ ಅದೇ ಸಮಯದಲ್ಲಿ ಮತ್ತು ಅದೇ ಸ್ಥಳದಲ್ಲಿ ಮತ್ತು ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿತರಾದ ನೀವು ಅಪ್ಸರಾ ಕೂಟದ ಹತ್ತಿರ ಶ್ರೀ ಗ್ರಾಮದೇವತೆಯ ಗುಡಿಯ ಬಾಗಿಲಕ್ಕೆ ಹಾಕಿದ ಕೀಲಿಗಳನ್ನು ಕಬ್ಬಿಣದ ರಾಡದಿಂದ ಕೊಂಡಿಯನ್ನು ಮುರಿದು ಒಳಹೊಕ್ಕು ಗುಡಿಯಲ್ಲಿದ್ದ ಬೆಳ್ಳಿ ಕಿರೀಟಗಳು**,** ಬೆಳ್ಳಿಯ ಉತ್ಸವ ಮುರ್ತಿ**,** ಬಂಗಾರದ ನತ್ತುಗಳು**,** ಬಂಗಾರದ ಗುಳದಾಳಿಗಳು **,** ರೋಲ್ಡ ಗೋಲ್ಡ ನಕ್ಲೇಸಗಳನ್ನು**,** ಕಾಣಿಕೆ ಪಟ್ಟಿಗೆಯಲಿಯ ಹಣ ಒಟ್ಟು ರೂ**.4,83,000/-** ರೂ ಕಿಮ್ಮತ್ತಿನ ಮಾಲನ್ನು ಕಳುವು ಮಾಡಿಕೊಂಡು ಮತ್ತು ರಸ್ತೆಯ ಬದಿಯಲ್ಲಿ ನಿಲ್ಲಿಸಿದ ಬಜಾಜ್ ಡಿಸ್ಕವರಿ ಮೋಟಾರ ಸೈಕಲ ನಂ**.**ಕೆಎ**-49-**ಇ**-6483** ನೇದ್ದನ್ನು ಕಳುವು ಮಾಡಿ ಸಿಕ್ಕ ಅಪರಾಧ ಐಪಿಸಿ ಕಲಂ **380** ರಡಿ ಶಿಕ್ಷಿಸಲ್ಪಡುವ ಅಪರಾಧವನ್ನು ಮಾಡಿರುವಿರಿ**.**

ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ**.**

ಸ್ಥಳಃ ಗೋಕಾಕ
ದಿಃ **07-02-2020**

ಪ್ರ.ದಿ.ನ್ಯಾ& ಪ್ರ.ದ.ನ್ಯಾದಂ.ಗೋಕಾಕ